‘ಧಾರ್ಮಿಕ ಕೃತಿಗಳ ಶಾಸ್ತ್ರ’ ಗ್ರಂಥಮಾಲಿಕೆ : ದೇವರ ಪೂಜೆ - ಖಂಡ ೫

# ಪಂಚೋಪಚಾರ ಮತ್ತು ಷೋಡಶೋಪಚಾರ ಪೂಜೆಯ ಹಿಂದಿನ ಶಾಸ್ತ್ರ

(The science in ritualistic worship with five and sixteen steps)

ಕನ್ನಡ (Kannada)

**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಸೂಕ್ಷ್ಮಜ್ಞಾನ ಪಡೆದವರು**

**ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ ಮತ್ತು ಇತರರು**

**ಸನಾತನ ಸಂಸ್ಥೆ**

**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ :** ಸೌ. ಯೋಗೇಶ್ರೀ ಘೋಳೆ ಮತ್ತು ಸೌ. ಜಾಹ್ನವಿ ಶಿಂದೆ

**First Edition** : Ananta Chaturdashi, Kaliyug Varsh 5111
(3rd September 2009)

**Fifth Edition** : Navaratrarambha, Kaliyug Varsh 5125
(15th October 2023)

**ಇಂದಿನವರೆಗೆ ಗ್ರಂಥದ 6,690 ಪ್ರತಿಗಳು ಪ್ರಕಾಶಿತಗೊಂಡಿವೆ !**

Translated from the original Marathi Holy text 'Panchopachar ani Shodashopachar poojanamagil shastra'
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ, ಗುಜರಾತಿ ಮತ್ತು ಒರಿಯಾ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಶ್ರೀಮತಿ ಅಶ್ವಿನಿ ಪ್ರಭು ಮತ್ತು
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 130 /-

**ISBN :** 978-93-92952-92-0 ಗ್ರಂಥ ಕ್ರ. : 110

**© ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಗ್ರಂಥದ ಸಂಕಲನಕಾರರ ಪರಿಚಯ

# ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. ಅಧ್ಯಾತ್ಮಪ್ರಸಾರಕ್ಕಾಗಿ 'ಸನಾತನ ಸಂಸ್ಥೆ'ಯ ಸ್ಥಾಪನೆ

೨. ಶೀಘ್ರ ಈಶ್ವರಪ್ರಾಪ್ತಿಗಾಗಿ 'ಗುರುಕೃಪಾಯೋಗ' ಎಂಬ ಸಾಧನಾಮಾರ್ಗದ ನಿರ್ಮಿತಿ : ಇದಕ್ಕನುಸಾರ ಸಾಧನೆ ಮಾಡಿ ೩.೯.೨೦೨೩ ರವರೆಗೆ ೧೨೫ ಸಾಧಕರು ಸಂತರಾಗಿದ್ದು, ೧,೦೪೬ ಸಾಧಕರು ಸಂತತ್ವದೆಡೆಗೆ ಮಾರ್ಗಕ್ರಮಣ ಮಾಡುತ್ತಿದ್ದಾರೆ.

೩. ಆಚಾರಧರ್ಮಪಾಲನೆ, ದೇವತೆಗಳು, ಸಾಧನೆ, ಆದರ್ಶ ರಾಷ್ಟ್ರನಿರ್ಮಾಣ, ಧರ್ಮರಕ್ಷಣೆ ಇತ್ಯಾದಿ ವಿವಿಧ ವಿಷಯಗಳ ಬಗ್ಗೆ ವಿಪುಲ ಗ್ರಂಥಗಳ ನಿರ್ಮಿತಿ

೪. ಹಿಂದುತ್ವವಾದಿ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದ ಸಂಸ್ಥಾಪಕ–ಸಂಪಾದಕರು

೫. ಹಿಂದೂ ರಾಷ್ಟ್ರದ (ಈಶ್ವರೀ ರಾಜ್ಯದ) ಸ್ಥಾಪನೆಯ ಉದ್ಘೋಷ (೧೯೯೮)

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಂತರು, ಸಂಪ್ರದಾಯಗಳು, ಹಿಂದುತ್ವವಾದಿಗಳು ಮುಂತಾದವರ ಸಂಘಟನೆ ಹಾಗೂ ಅವರಿಗೆ ಮಾರ್ಗದರ್ಶನ !

**(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ 'www.Sanatan.org/Kannada')**

### ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಸಾಧಕರಿಗೆ ನೀಡಿದ ಭರವಸೆ !

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

Jayant Balaji Athavale
17.5.1996

# ಸನಾತನದ ಸೂಕ್ಷ್ಮ ಜ್ಞಾನ ಪಡೆಯುವ ಸಾಧಕರ ಅದ್ವಿತೀಯತೆ !



ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ

ಸೂಕ್ಷ್ಮ ಜ್ಞಾನವನ್ನು ಪಡೆಯುವ ಸಾಧಕರು ಪೃಥ್ವಿಯ ಮೇಲೆ ಎಲ್ಲಿಯೂ ಲಭ್ಯವಿರದ ಅಧ್ಯಾತ್ಮದಲ್ಲಿನ ವಿವಿಧ ವಿಷಯಗಳಲ್ಲಿನ ಆಳವಾದ ಶಾಸ್ತ್ರೀಯ ಜ್ಞಾನವನ್ನು ಸೂಕ್ಷ್ಮದಿಂದ ಪಡೆಯುತ್ತಾರೆ. ೨೦೦೩ ರಿಂದ ದೊರೆಯುತ್ತಿರುವ ಈ ಜ್ಞಾನವನ್ನು ಸಾಧಾರಣವಾಗಿ ಸನಾತನದ ೬೦ ಕ್ಕೂ ಹೆಚ್ಚಿನ ಗ್ರಂಥಗಳಲ್ಲಿ ತೆಗೆದುಕೊಳ್ಳಲಾಗಿದೆ. ಈಶ್ವರನಿಂದ ಸಿಗುವ ಸಾತ್ತ್ವಿಕ ಜ್ಞಾನವನ್ನು ಗ್ರಹಣ ಮಾಡಲು ಅವರಿಗೆ ಆಸುರೀ ಶಕ್ತಿಗಳ ಆಕ್ರಮಣವನ್ನೂ ಎದುರಿಸಬೇಕಾಗುತ್ತದೆ. ಹೀಗಿದ್ದರೂ ಅವರು ಗುರುಕೃಪೆಯ ಬಲದಿಂದ ಈ ಸೇವೆಯನ್ನು ಮಾಡುತ್ತಲೇ ಇದ್ದಾರೆ.

---

## ಗ್ರಂಥದ ಅನುಕ್ರಮಣಿಕೆ

**(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)**

**ಅಧ್ಯಾಯ ೧. ದೇವರ ಪೂಜೆಯ ಸಾಮಾನ್ಯ ಮಾಹಿತಿ** ೯

* ಕೆಲವು ದೇವತೆಗಳ ಪೂಜೆಯ ವೈಶಿಷ್ಟ್ಯಗಳು ಮತ್ತು ಅವುಗಳ ಹಿಂದಿನ ಕಾರಣಗಳು ೧೧
* ಪೂಜೆಯನ್ನು ಯಾವ ದಿಕ್ಕಿನಲ್ಲಿ ಮತ್ತು ಯಾರು ಮಾಡಬೇಕು ? ೧೬
* ದೇವರ ಪೂಜೆಯನ್ನು ಮಾಡುವಾಗ ನಮ್ಮ ಭಾವ ಹೇಗಿರಬೇಕು ? ೧೯
* ದೇವರಪೂಜೆಯ ಕೃತಿಗಳ ಶಾಸ್ತ್ರವನ್ನು ಏಕೆ ತಿಳಿದುಕೊಳ್ಳಬೇಕು? ೨೦

**ಅಧ್ಯಾಯ ೨. ಪಂಚೋಪಚಾರ ಪೂಜೆ – ಕೃತಿ ಮತ್ತು ಶಾಸ್ತ್ರ** ೨೧

* ಅರಿಶಿನ-ಕುಂಕುಮ ಅರ್ಪಿಸುವಾಗ, ನಿರ್ಮಾಲ್ಯವನ್ನು ತೆಗೆಯುವಾಗ ಅನಾಮಿಕಾ ಮತ್ತು ಹೆಬ್ಬೆರಳನ್ನು ಏಕೆ ಉಪಯೋಗಿಸಬೇಕು? ೩೧
* ದೇವತೆಗಳಿಗೆ ಮೊದಲು ಧೂಪ, ಆಮೇಲೆ ಊದುಬತ್ತಿ ಮತ್ತು ಕೊನೆಗೆ ದೀಪವನ್ನು ಏಕೆ ಬೆಳಗುತ್ತಾರೆ ? ೪೩
* ದೇವರಿಗೆ ನೈವೇದ್ಯವನ್ನು ಅರ್ಪಿಸುವಾಗ ತುಳಸೀ ಎಲೆ (ದಳ) ಯನ್ನು ಏಕೆ ಉಪಯೋಗಿಸಬೇಕು ? ೪೮
* ಪೂಜೆಯ ಸಮಯದಲ್ಲಿ ಅಥವಾ ನೈವೇದ್ಯವನ್ನು ಅರ್ಪಿಸುವಾಗ ತಟ್ಟೆಯ ಸುತ್ತಲೂ ನೀರನ್ನು ಏಕೆ ಸಿಂಪಡಿಸುತ್ತಾರೆ? ೪೮

**ಅಧ್ಯಾಯ ೩. ಷೋಡಶೋಪಚಾರ ಪೂಜೆ – ಕೃತಿ ಮತ್ತು ಶಾಸ್ತ್ರ** ೬೮

* ದೇವತೆಯ ಆವಾಹನೆ ಮಾಡುವಾಗ ಮೂರ್ತಿಯ ಮೇಲೆ ಅಕ್ಷತೆ ಅಥವಾ ತುಳಸಿ ಎಲೆಯನ್ನು ಅರ್ಪಿಸುವುದರ ಹಿಂದಿನ ಶಾಸ್ತ್ರವೇನು ? ೭೪
* ಅರ್ಘ್ಯವನ್ನು ಕೊಡುವಾಗ ನೀರಿನೊಂದಿಗೆ ಗಂಧ, ಹೂವು ಮತ್ತು ಅಕ್ಷತೆಯನ್ನು ಏಕೆ ಅರ್ಪಿಸುತ್ತಾರೆ ? ೭೬
* ಆಚಮನಕ್ಕೆ ಉಪಯೋಗಿಸುವ ನೀರನ್ನು ಕರ್ಪೂರದಿಂದ ಏಕೆ ಸುಗಂಧಿತಗೊಳಿಸುತ್ತಾರೆ ? ೭೭
* ದೇವರಿಗೆ ಅಭಿಷೇಕ ಮಾಡುವಾಗ ಸುಗಂಧದ್ರವ್ಯಗಳನ್ನು ಏಕೆ ಉಪಯೋಗಿಸುತ್ತಾರೆ ? ೮೦
* ಪೂಜೆಯ ಕೊನೆಯಲ್ಲಿ ದೇವರಲ್ಲಿ ಕ್ಷಮಾಯಾಚನೆ ಮಾಡುವುದರ ಮಹತ್ವ ೮೩

**ಅಧ್ಯಾಯ ೪. ದೇವರ ಪೂಜೆಯಾದ ನಂತರ ಮಾಡಬೇಕಾದ ಕೃತಿಗಳು ಮತ್ತು ಅವುಗಳ ಹಿಂದಿನ ಶಾಸ್ತ್ರ** ೮೮

**ಅಧ್ಯಾಯ ೫. ಇತರ ಮಾಹಿತಿ** ೯೫

卐 **‘ಪಂಚೋಪಚಾರ ಮತ್ತು ಷೋಡಶೋಪಚಾರ ಪೂಜೆಯ ಹಿಂದಿನ ಶಾಸ್ತ್ರ’ ಈ ವಿಷಯದ ಬಗ್ಗೆ ಆಳವಾದ ಸೂಕ್ಷ್ಮಸ್ತರದಲ್ಲಿನ ಅಧ್ಯಾತ್ಮಶಾಸ್ತ್ರೀಯ ಜ್ಞಾನ** ೯೯

卐 **ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ !** ೧೦೩

卐 **ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** ೧೦೫

## ಪರಾತ್ಪರ ಗುರು ಡಾ. ಜಯಂತ ಆಠವಲೆಯವರ ‘ಸಚ್ಚಿದಾನಂದ ಪರಬ್ರಹ್ಮ’ ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ ‘ಸಪ್ತರ್ಷಿ ಜೀವನಾಡಿಪಟ್ಟಿ’ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು ‘ಸಚ್ಚಿದಾನಂದ ಪರಬ್ರಹ್ಮ’ ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು ‘ಪ.ಪೂ. [ಪರಮ ಪೂಜ್ಯ]’ ಮತ್ತು ‘ಪರಾತ್ಪರ ಗುರು’ ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.

## ಮನೋಗತ

ಹಿಂದೂ ಧರ್ಮದಲ್ಲಿನ ಸಗುಣ ಉಪಾಸನೆಯ ಅಡಿಪಾಯವೆಂದರೆ 'ದೇವರ ಪೂಜೆ'. ಈಗಿನ 'ಪ್ರತಿನಿತ್ಯದ ಗಡಿಬಿಡಿಯ ದಿನಗಳಲ್ಲಿ ದೇವರ ಪೂಜೆಯನ್ನು ಮಾಡಲು ಯಾರಿಗೆ ಸಮಯವಿದೆ ?' ಈ ರೀತಿಯ ನಕಾರಾತ್ಮಕ ಮಾನಸಿಕತೆಯು ಇತ್ತೀಚೆಗೆ ಬಹಳಷ್ಟು ಜನರಲ್ಲಿ ಕಂಡುಬರುತ್ತಿದೆ. ಕೇವಲ ನಿತ್ಯದ ಒಂದು ಕರ್ಮವನ್ನು ಮಾಡಿ ಮುಗಿಸಬೇಕೆಂದು ದೇವರ ಮೇಲೆ ಸರಸರನೆ ನೀರು ಸುರಿದು ಗಂಧತಿಲಕವನ್ನು ಹಚ್ಚುವುದು ಮತ್ತು ಯಾವುದಾದರೊಂದು ಹೂವನ್ನು ಅರ್ಪಿಸಿ ಊದುಬತ್ತಿಯಿಂದ ಬೆಳಗುವುದು ಮತ್ತು 'ದೇವರ ಪೂಜೆ'ಯಾಯಿತು ಎಂದು ತಿಳಿದುಕೊಳ್ಳುವುದು; ಈ ರೀತಿ ಇಂದು ಎಲ್ಲೆಡೆಗಳಲ್ಲಿ ಕಾಣಿಸುತ್ತಿದೆ. ಎಲ್ಲರ ಪಾಲನೆ-ಪೋಷಣೆಯನ್ನು ಮಾಡುವ ಭಗವಂತನ ಪೂಜೆಯನ್ನು ಈ ರೀತಿ ಮಾಡಿ ಮುಗಿಸುವುದಕ್ಕೆ ದೇವರ ಪೂಜೆ ಎನ್ನಬಹುದೇನು ? ಹೀಗೆ ಮಾಡಿದರೆ ಭಗವಂತನು ನಮ್ಮ ಮೇಲೆ ಕೃಪೆಯನ್ನಾದರೂ ಏಕೆ ಮಾಡಬೇಕು ? ಹೇಗೆ ನಾವು ಮನೆಗೆ ಬರುವ ಅತಿಥಿಗಳನ್ನು ಆದರದಿಂದ ಸ್ವಾಗತಿಸುತ್ತೇವೆಯೋ ಅದೇ ರೀತಿ ದೇವರನ್ನೂ ಆದರಿಸಿದರೆ ಅಂದರೆ ದೇವರ ಪೂಜೆ ಯನ್ನು ಯಥಾಯೋಗ್ಯವಾಗಿ ಮಾಡಿದರೆ, ಅವನು ನಮ್ಮ ಮೇಲೆ ಪ್ರಸನ್ನನಾಗಿ ಆಶೀರ್ವಾದವನ್ನು ಕೊಡುತ್ತಾನೆ. ಆದುದರಿಂದಲೇ ಧರ್ಮಶಾಸ್ತ್ರದಲ್ಲಿ ದೇವತೆಗಳನ್ನು ಆವಾಹನೆ ಮಾಡುವುದು, ಅವರಿಗೆ ಕುಳಿತುಕೊಳ್ಳಲು ಆಸನವನ್ನು ಕೊಡುವುದು, ಅವರಿಗೆ ಚರಣಗಳನ್ನು ತೊಳೆದುಕೊಳ್ಳಲು ನೀರನ್ನು ಕೊಡುವುದು ಮುಂತಾದ ಕ್ರಮವಾದ ಹದಿನಾರು ಉಪಚಾರಗಳನ್ನು ಕಲಿಸಿ ವಿಧಿಪೂರ್ವಕ ಮತ್ತು ಭಾವಪೂರ್ಣ ವಾಗಿ ಧರ್ಮಾಚರಣೆಯನ್ನು ಮಾಡಲು ಕಲಿಸಲಾಗಿದೆ. ೧೬ ಉಪಚಾರಗಳಲ್ಲಿ ೯. ಗಂಧವನ್ನು ಹಚ್ಚುವುದು, ೧೦. ಹೂವುಗಳನ್ನು ಅರ್ಪಿಸುವುದು, ೧೧. ಧೂಪ ವನ್ನು ತೋರಿಸುವುದು, ೧೨. ದೀಪವನ್ನು ಬೆಳಗುವುದು, ೧೩. ನೈವೇದ್ಯ ತೋರಿಸು ವುದು ಈ ಐದು ಉಪಚಾರಗಳಿಗೆ 'ಪಂಚೋಪಚಾರ' ಎನ್ನುತ್ತಾರೆ. ಹದಿನಾರು ಉಪಚಾರಗಳನ್ನು ಮಾಡಲು ಆಗದಿದ್ದರೆ ಈ ಐದು ಉಪಚಾರಗಳಿಂದಾದರೂ ದೇವರ ಪೂಜೆಯನ್ನು ಮಾಡಬೇಕು. ಬಹಳಷ್ಟು ಜನರಿಗೆ ಷೋಡಶೋಪಚಾರ ಪೂಜೆಯನ್ನು ಮಾಡಲು ಸಾಧ್ಯವಾಗುವುದಿಲ್ಲ, ಆದುದರಿಂದ ಅವರಿಗೆ ಪಂಚೋಪಚಾರ ಪೂಜೆಯ ಮಾಹಿತಿಯನ್ನು ತಿಳಿದುಕೊಳ್ಳಲು ಸುಲಭವಾಗಬೇಕೆಂದು ಗ್ರಂಥದಲ್ಲಿ ಮೊದಲು ಪಂಚೋಪಚಾರ ಪೂಜೆಯ ಮಾಹಿತಿ, ಆಮೇಲೆ ಷೋಡಶೋಪಚಾರ ಪೂಜೆಯ ಮಾಹಿತಿಯನ್ನು ನೀಡಲಾಗಿದೆ.

ತ್ರಿಕಾಲದರ್ಶಿಗಳಾದ ನಮ್ಮ ಋಷಿಮುನಿಗಳು ಧರ್ಮಶಾಸ್ತ್ರದಲ್ಲಿ ಹೇಳಿದಂತೆ ದೇವರ ಪೂಜೆಯನ್ನು ಮಾಡಿದರೆ ಮಾತ್ರ ನಮಗೆ ಅವರ ಸಂಕಲ್ಪಶಕ್ತಿಯ ಲಾಭವು

ಸಿಗುತ್ತದೆ. ದೇವರ ಪೂಜೆಯನ್ನು ಧರ್ಮಶಾಸ್ತ್ರಕ್ಕನುಸಾರ ಮಾಡುವಾಗ ಭಕ್ತಿಭಾವಸಹಿತ ಮಾಡುವುದೂ ಸಹ ಅಷ್ಟೇ ಮಹತ್ವದ್ದಾಗಿದೆ. ದೇವರ ಪೂಜೆಯಲ್ಲಿ ಭಗವಂತನ ಬಗ್ಗೆ ಪ್ರೇಮ, ಭಾವವಿದ್ದರೆ ಮಾತ್ರ ಅದು ಭಗವಂತನಿಗೆ ತಲುಪುತ್ತದೆ, ಏಕೆಂದರೆ ಭಗವಂತನಿಗೆ ಭಾವವೇ ಬೇಕಾಗಿರುತ್ತದೆ. ಸಾಮಾನ್ಯ ಭಕ್ತರಲ್ಲಿ ಭಾವವು ತಾನಾಗಿಯೇ ನಿರ್ಮಾಣವಾಗುವುದಿಲ್ಲ; ದೇವರ ಪೂಜೆಯಲ್ಲಿನ ವಿವಿಧ ಕೃತಿಗಳ ಹಿಂದಿನ ಶಾಸ್ತ್ರವನ್ನು ಸರಿಯಾಗಿ ಅರಿತುಕೊಂಡು ಪೂಜೆಯನ್ನು ಮಾಡಿದರೆ, ಮೊದಲು ದೇವರ ಪೂಜೆಯ ಬಗ್ಗೆ, ಆಮೇಲೆ ದೇವರ ಬಗ್ಗೆ ಶ್ರದ್ಧೆಯು ನಿರ್ಮಾಣ ವಾಗಿ ಅದು ಭಾವದಲ್ಲಿ ರೂಪಾಂತರವಾಗುತ್ತದೆ. ಆದುದರಿಂದ ಗ್ರಂಥದಲ್ಲಿ ದೇವರ ಪೂಜೆಯಲ್ಲಿನ ಕೃತಿಗಳ ಹಿಂದಿನ ಅಧ್ಯಾತ್ಮಶಾಸ್ತ್ರವನ್ನು ತಿಳಿಸಿ ಹೇಳಲು ಹೆಚ್ಚಿನ ಒತ್ತನ್ನು ನೀಡಲಾಗಿದೆ.

ದೇವತೆಯ ಆವಾಹನೆಯನ್ನು ಮಾಡುವಾಗ ಮೂರ್ತಿಯ ಮೇಲೆ ಅಕ್ಷತೆ ಅಥವಾ ತುಳಸಿ ಎಲೆಯನ್ನು ಏಕೆ ಅರ್ಪಿಸಬೇಕು, ಅರ್ಘ್ಯವನ್ನು ನೀಡುವಾಗ ನೀರಿನೊಂದಿಗೆ ಗಂಧ, ಹೂವು ಮತ್ತು ಅಕ್ಷತೆಯನ್ನು ಏಕೆ ಅರ್ಪಿಸಬೇಕು, ದೇವತೆಗೆ ಅಭಿಷೇಕವನ್ನು ಮಾಡುವಾಗ ಸುಗಂಧದ್ರವ್ಯವನ್ನು ಏಕೆ ಉಪಯೋಗಿಸಬೇಕು, ದೇವತೆಗೆ ಮೊದಲು ಗಂಧವನ್ನು ಹಚ್ಚಿ ನಂತರ ಅರಿಶಿನ-ಕುಂಕುಮವನ್ನು ಏಕೆ ಅರ್ಪಿಸಬೇಕು, ದೇವತೆಗೆ ನೈವೇದ್ಯವನ್ನು ಅರ್ಪಿಸುವ ಎಲೆಯನ್ನು ಯಾವ ರೀತಿ ಇಡಬೇಕು ಮುಂತಾದ ಅನೇಕ ವಿಷಯಗಳ ಬುದ್ಧಿಯ ಆಚೆಗಿನ ಶಾಸ್ತ್ರೀಯ ಮಾಹಿತಿ ಯನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ಅದರೊಂದಿಗೆ ಯಾವ ದೇವತೆಗೆ ಯಾವ ಹೂವುಗಳನ್ನು ಅರ್ಪಿಸಬೇಕು, ದೇವತೆಗೆ ಹೂವುಗಳನ್ನು ಅರ್ಪಿಸುವಾಗ ಅವುಗಳನ್ನು ವಿಶಿಷ್ಟ ಸಂಖ್ಯೆಯಲ್ಲಿ ಮತ್ತು ವಿಶಿಷ್ಟ ರಚನೆಯಲ್ಲಿ ಏಕೆ ಅರ್ಪಿಸಬೇಕು ಮತ್ತು ಅದರ ಹಿಂದಿನ ಶಾಸ್ತ್ರವೇನು, ದೇವತೆಗೆ ಎಷ್ಟು ಊದುಬತ್ತಿಗಳಿಂದ ಬೆಳಗಬೇಕು ಮುಂತಾದ ಹೊಸ ಜ್ಞಾನವನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ.

ಹಿಂದೂ ಧರ್ಮವನ್ನು ಹೊರತುಪಡಿಸಿ ಇತರ ಯಾವುದೇ ಪಂಥದಲ್ಲಿ ಧಾರ್ಮಿಕ ವಿಧಿಗಳ ಬಗ್ಗೆ ಇಷ್ಟು ಆಳವಾದ ಶಾಸ್ತ್ರೀಯ ಮಾಹಿತಿಯು ಉಪಲಬ್ಧವಿಲ್ಲ. ಇದರಿಂದಲೇ ಹಿಂದೂ ಧರ್ಮದ ಶ್ರೇಷ್ಠತೆಯು ಗಮನಕ್ಕೆ ಬರುತ್ತದೆ.

ಎಲ್ಲ ಭಕ್ತರು ಗ್ರಂಥದಲ್ಲಿ ನೀಡಿರುವ ಶಾಸ್ತ್ರವನ್ನು ಅರಿತುಕೊಂಡು, ಅವರ ದೇವರ ಪೂಜೆಯು ಭಾವಪೂರ್ಣವಾಗಿ ಆಗಲಿ ಮತ್ತು ಅವರಿಗೆ ಆದಷ್ಟು ಹೆಚ್ಚು ಈಶ್ವರನ ಕೃಪಾಶೀರ್ವಾದವು ಲಭಿಸಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ.

**– ಸಂಕಲನಕಾರರು**